# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 645 |
| ಸದಸ್ಯರ ಹೆಸರು | : | ಶ್ರೀ ಕೆ. ಗೋವಿಂದ ರಾಜ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14.12.2020 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

<table>
<tr><th>ಕ್ರ.ಸ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರಿ ಶಾಲೆಗಳ ಶೌಚಾಲಯಗಳು ಸಮರ್ಪಕ ನಿರ್ವಹಣೆ ಕೊರತೆಯಿಂದ ನೈರ್ಮಲ್ಯ ಶುಚಿತ್ವ ಇಲ್ಲದಿರುವುದು, ನೀರಿನ ಕೊರತೆ, ಕಟ್ಟಡಗಳ ಶಿಥಿಲತೆ ಹಾಗೂ ಇನ್ನಿತರ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ</td></tr>
<tr><td>ಆ)</td><td>ಬಂದಿದ್ದಲ್ಲಿ, ಸದರಿ ಸಮಸ್ಯೆಗಳನ್ನು ತುರ್ತಾಗಿ ನಿವಾರಿಸಲು ಕೈಗೊಂಡಿರುವ ಕ್ರಮಗಳೇನು; (ವಿವರಗಳನ್ನು ಒದಗಿಸುವುದು)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯಗಳ ವಾರ್ಷಿಕ ನಿರ್ವಹಣೆಗಾಗಿ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಅನುದಾನ</th><th>ಷರಾ</th></tr>
<tr><td>2018-19</td><td>ರೂ.2500 ಲಕ್ಷ</td><td rowspan="3">2020-21ನೇ ಸಾಲಿನಲ್ಲಿ ಪ್ರತಿ ಕಿರಿಯ ಪ್ರಾಥಮಿಕ ಶಾಲೆಗೆ ವಾರ್ಷಿಕ ರೂ.5400/- ರಂತೆ, ಪ್ರತಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಾರ್ಷಿಕ ರೂ.6790/- ರಂತೆ ಮತ್ತು ಪ್ರತಿ ಪ್ರೌಢ ಶಾಲೆಗಳಿಗೆ ವಾರ್ಷಿಕ ರೂ.7400/- ರಂತೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗಾಗಿ ನೇರವಾಗಿ ಎಸ್.ಡಿ.ಎಂ.ಸಿ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ. ಇಲ್ಲಿಯವರೆಗೆ ರೂ.1500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.</td></tr>
<tr><td>2019-20</td><td>ರೂ.2500 ಲಕ್ಷ</td></tr>
<tr><td>2020-21</td><td>ರೂ.3000 ಲಕ್ಷಗಳಲ್ಲಿ, ರೂ.1500 ಲಕ್ಷಗಳನ್ನು ಶಾಲೆಗಳ ಎಸ್.ಡಿ.ಎಂ.ಸಿ ಖಾತೆಗಳಿಗೆ ಖಜಾನೆ-2ರ ಬಿ.ಎಂ.ಎಸ್ ಮೂಲಕ ಜಮೆ ಮಾಡಲಾಗಿದೆ.</td></tr>
</table>
ಸ್ವಚ್ಛ ಭಾರತ್ ಮಿಷನ್(ಗ್ರಾ) ಹಾಗೂ ಸರ್ವಶಿಕ್ಷಣ ಅಭಿಯಾನ,ಸಾರ್ವಜನಿಕ ಶಿಕ್ಷಣ ಇಲಾಖೆಯ</td></tr>
</table>

<table>
<tr><td></td><td></td><td>ಒಗ್ಗೂಡಿಸುವಿಕೆಯಲ್ಲಿ 670 ಶೌಚಾಲಯಗಳ ನಿರ್ಮಾಣವನ್ನು ಕೈಗೆತ್ತಿಕೊಂಡಿದ್ದು, 662 ಕಾಮಗಾರಿಗಳು ಪೂರ್ಣಗೊಂಡಿದ್ದು,ಉಳಿದ 8 ಕಾಮಗಾರಿಗಳು ಪ್ರಗತಿಯಲ್ಲಿವೆ. (ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ)<br>ಅಲ್ಲದೆ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖಾವತಿಯಿಂದ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಸರ್ಕಾರಿ ಗ್ರಾಮೀಣ ಶಾಲೆಗಳ 1633 ಶೌಚಾಲಯಗಳಿಗೆ ಹಾಗೂ 288 ಅಡುಗೆ ಕೋಣೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಇ)</td><td>ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ ನಿಟ್ಟಿನಲ್ಲಿ ಖಾಸಗಿ ಸಹಭಾಗಿತ್ವವನ್ನು ಸರ್ಕಾರವು ಪ್ರೋತ್ಸಾಹಿಸುವುದೇ? (ವಿವರ ಒದಗಿಸುವುದು)</td><td>ಸಂಘ ಸಂಸ್ಥೆಗಳು ಮತ್ತು ದಾನಿಗಳು ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಡಲು ಮುಂದೆ ಬಂದಲ್ಲಿ ಪ್ರೋತ್ಸಾಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ, ಕಳೆದ 03 ವರ್ಷಗಳಲ್ಲಿ ಕೆಳಕಂಡಂತೆ ಸಹಾಯವನ್ನು ಪಡೆಯಲಾಗಿದೆ.
<table>
<tr><th>ಕ್ರ ಸಂ.</th><th>ಸಂಸ್ಥೆ</th><th>ಕಾಮಗಾರಿ</th></tr>
<tr><td>1</td><td>Rotary Orchid</td><td>ವಸಂತನಗರ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ರೂ.4.00 ಕೋಟಿ ವೆಚ್ಚದಲ್ಲಿ ಗಂಡುಮಕ್ಕಳಿಗೆ, ಹೆಣ್ಣುಮಕ್ಕಳಿಗೆ ಮತ್ತು ಶಿಕ್ಷಕರಿಗೆ ಪ್ರತ್ಯೇಕವಾದ ಆಧುನಿಕ ರೀತಿಯ ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.</td></tr>
<tr><td>2</td><td>Yuva Unstoppable</td><td>ಕರ್ನಾಟಕ ರಾಜ್ಯದ 06 ಜಿಲ್ಲೆಗಳ 100 ಸರ್ಕಾರಿ ಶಾಲೆಗಳಲ್ಲಿ ಗಂಡುಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ.</td></tr>
<tr><td>3</td><td>Child Found</td><td>ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ 12 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ.</td></tr>
<tr><td>4</td><td>UV Green/ Social Change</td><td>ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಒಟ್ಟು 1021 ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ವಹಣೆ ಬಳಕೆಯ ಕ್ರಮ, ನೈರ್ಮಲ್ಯದ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸುವ ಕಾರ್ಯ ಮಾಡಿರುತ್ತಾರೆ.</td></tr>
<tr><td>5</td><td>Embassy Group</td><td>ಬೆಂಗಳೂರು ನಗರ ಜಿಲ್ಲೆಗಳಲ್ಲಿ 11 ಸರ್ಕಾರಿ ಶಾಲೆಗಳ ಕಟ್ಟಡಗಳ ಪುನರ್ ನಿರ್ಮಾಣ ಮಾಡುವ ಕಾರ್ಯ ಮಾಡಿರುತ್ತಾರೆ. ಇದರಲ್ಲಿ ಗಂಡುಮಕ್ಕಳಿಗೆ, ಹೆಣ್ಣುಮಕ್ಕಳಿಗೆ ಮತ್ತು ಶಿಕ್ಷಕರಿಗೆ ಪ್ರತ್ಯೇಕವಾದ ಆಧುನಿಕ ರೀತಿಯ ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.</td></tr>
<tr><td>6</td><td>Ascendas Sinbridge</td><td>ಮಹದೇವಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡವನ್ನು ರೂ.2.00 ಕೋಟಿ ವೆಚ್ಚದಲ್ಲಿ ನಿರ್ಮಿಸಿರುತ್ತಾರೆ. ಇದರಲ್ಲಿ ಗಂಡುಮಕ್ಕಳಿಗೆ, ಹೆಣ್ಣುಮಕ್ಕಳಿಗೆ ಮತ್ತು ಶಿಕ್ಷಕರಿಗೆ ಪ್ರತ್ಯೇಕವಾದ ಆಧುನಿಕ ರೀತಿಯ ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.</td></tr>
<tr><td>7</td><td>Akila Bharathiya Terpanth Yuvak Parishath</td><td>ಆಯ್ದ 100 ಸರ್ಕಾರಿ ಶಾಲೆಗಳಲ್ಲಿ ಪ್ರತಿ ಶಾಲೆಗೆ ಒಂದು ಕೊಠಡಿ(ಶೌಚಾಲಯ ಸೇರಿದಂತೆ) ಯನ್ನು ನಿರ್ಮಾಣ ಮಾಡುವ ಕಾರ್ಯ ಪ್ರಗತಿಯಲ್ಲಿದೆ.</td></tr>
</table></td></tr>
</table>

**ಇಪಿ: 235 ಯೋಸಕ 2020**

(ಎಸ್.ಸುರೇಶ್ ಕುಮಾರ್)

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಅನುಬಂಧ

## SAMAGRA SHIKSHANA - KARNATAKA

District wise Progress Report for Construction of Toilets in Schools - under Swach Bharat Mission - End Of NOVEMBER - 2020.

| Sl. No. | District Name | Secondary Schools | | Primary Schools | | TOTAL | | Total | Not Started | In Progress | Completed | BOY'S | GIRL'S |
|---|---|---|---|---|---|---|---|---|---|---|---|---|---|
| | | Boys Toilet | Girls Toilet | Boys Toilet | Girls Toilet | Boys Toilet | Girls Toilet | | | | | | |
| 1 | Bagalkot | 2 | 1 | 11 | 14 | 13 | 15 | 28 | 0 | 0 | 28 | 13 | 15 |
| 2 | Bengaluru Rural | 0 | 0 | 9 | 5 | 9 | 5 | 14 | 0 | 0 | 14 | 9 | 5 |
| 3 | Bengaluru North | 0 | 0 | 1 | 3 | 1 | 3 | 4 | 1 | 1 | 2 | 0 | 2 |
| 4 | Bengaluru South | 0 | 0 | 9 | 7 | 9 | 7 | 16 | 0 | 2 | 14 | 9 | 5 |
| 5 | Belagavi | 4 | 1 | 13 | 15 | 17 | 16 | 33 | 0 | 0 | 33 | 17 | 16 |
| 6 | Chikkodi | 4 | 4 | 25 | 25 | 29 | 29 | 58 | 0 | 0 | 58 | 29 | 29 |
| 7 | Bidar | 0 | 0 | 15 | 31 | 15 | 31 | 46 | 0 | 0 | 46 | 15 | 31 |
| 8 | Chamarajanagar | 5 | 4 | 14 | 13 | 19 | 17 | 36 | 0 | 0 | 36 | 19 | 17 |
| 9 | Chikkaballapura | 0 | 0 | 10 | 10 | 10 | 10 | 20 | 0 | 0 | 20 | 10 | 10 |
| 10 | Chikkamagaluru | 0 | 0 | 5 | 7 | 5 | 7 | 12 | 0 | 0 | 12 | 5 | 7 |
| 11 | Chitradurga | 2 | 0 | 18 | 2 | 20 | 2 | 22 | 0 | 0 | 22 | 20 | 2 |
| 12 | Davanagere | 1 | 1 | 59 | 13 | 60 | 14 | 74 | 0 | 0 | 74 | 60 | 14 |
| 13 | Gadag | 1 | 0 | 2 | 0 | 3 | 0 | 3 | 0 | 0 | 3 | 3 | 0 |
| 14 | Hassan | 1 | 0 | 38 | 0 | 39 | 0 | 39 | 0 | 0 | 39 | 39 | 0 |
| 15 | Haveri | 1 | 2 | 14 | 11 | 15 | 13 | 28 | 0 | 0 | 28 | 15 | 13 |
| 16 | Kolar | 12 | 1 | 97 | 2 | 109 | 3 | 112 | 1 | 1 | 110 | 108 | 2 |
| 17 | Kodagu | 0 | 0 | 1 | 1 | 1 | 1 | 2 | 0 | 0 | 2 | 1 | 1 |
| 18 | Mandya | 0 | 0 | 5 | 2 | 5 | 2 | 7 | 0 | 0 | 7 | 5 | 2 |
| 19 | Mysuru | 0 | 0 | 34 | 1 | 34 | 1 | 35 | 0 | 0 | 35 | 34 | 1 |
| 20 | Ramanagara | 0 | 0 | 7 | 0 | 7 | 0 | 7 | 0 | 0 | 7 | 7 | 0 |
| 21 | Shivamogga | 0 | 0 | 8 | 1 | 8 | 1 | 9 | 0 | 0 | 9 | 8 | 1 |
| 22 | Tumakuru | 0 | 0 | 20 | 2 | 20 | 2 | 22 | 0 | 1 | 21 | 19 | 2 |
| 23 | Madhugiri | 0 | 0 | 13 | 14 | 13 | 14 | 27 | 0 | 0 | 27 | 13 | 14 |
| 24 | Udupi | 3 | 0 | 7 | 2 | 10 | 2 | 12 | 0 | 0 | 12 | 10 | 2 |
| 25 | U.Kannada | 1 | 0 | 0 | 1 | 1 | 1 | 2 | 0 | 0 | 2 | 1 | 1 |
| 26 | Sirsi | 0 | 0 | 2 | 0 | 2 | 0 | 2 | 0 | 1 | 1 | 1 | 0 |
| | Total | 37 | 14 | 437 | 182 | 474 | 196 | 670 | 2 | 6 | 662 | 470 | 192 |

State Project Engineer
Rashtriya Madhyamika Shiksha Abhiyan